

ಭಕ್ತರ ಮೇಲೆ ಶ್ರೀಕೃಷ್ಣನ ಅಕ್ಕರೆ
ಕಥೆ: ರಾಘವೇಶಾನಂದ
ಚಿತ್ರ : ಶಂಕರ್
ಕುರುಕ್ಷೇತ್ರ ಯುದ್ಧದ ಒಂಬತ್ತನೇ ದಿನ, ಭೀಷ್ಮನ ಬಿಡಾರಕ್ಕೆ ದುರ್ಯೋಧನ ಹೋದನು. ಭೀಷ್ಮ ಪಾಂಡವರ ಪ್ರಾಣವನ್ನು ಉಳಿಸಲು ಅರೆ ಮನಸ್ಸಿನಿಂದ ಕಾದಿದನೆಂದು ಮೂದಲಿಸಿದನು.
1
ದುರ್ಯೋಧನ, ನಾಳೆ ತನಕ ತಾಳು. ಪಾಂಡವರನ್ನು ನೆಲಸಮ ಮಾಡುವೆನು.
ಅವರನ್ನು ಕೇವಲ ಸೋಲಿಸುವೆನೆಂದು ಹೇಳದಿರು. ಅವರನ್ನು ಖಚಿತವಾಗಿ ಕೊಲ್ಲುವೆನೆಂದು ಹೇಳು.
2
ಹಾಗೆಯೇ ಆಗಲಿ
ಈ ಭರವಸೆ ಪಡೆಯಲೆಂದೇ ನಾನಿಲ್ಲಿಗೆ ಬಂದದ್ದು.
3
ಅದೇ ರಾತ್ರಿ ಪಾಂಡವರಿಗೆ ಅನಿರೀಕ್ಷಿತವಾಗಿ ಈ ಭಯಂಕರ ಸುದ್ದಿ ತಲುಪಿತು. ಯಾರೂ ಭೀಷ್ಮನನ್ನು ಎದುರಿಸಲಾರರೆಂದು ಖಾತ್ರಿಯಾಯಿತು. ದ್ರೌಪದಿ ಕೂಡ ಸ್ತಂಭೀಭೂತಳಾದಳು.
ಭೀಷ್ಮ ಹೇಳುತ್ತಿದ್ದ, ಅವನು ಕೌರವರಿಗೆ ಸಹಾಯ ಮಾಡಿದರೂ ಜಯ ನಮ್ಮದಾಗುವುದೆಂದು. ಏಕೆಂದರೆ ನಾವು ಸತ್ಯಕ್ಕಾಗಿ ಯುದ್ಧ ಮಾಡುತ್ತಿದ್ದೇವೆ. ಆದರೆ ಈಗ ಪಾಂಡವರನ್ನು ಕೊಲ್ಲುವುದಾಗಿ ದುರ್ಯೋಧನನಿಗೆ ಭಾಷೆ ಕೊಟ್ಟಿದ್ದಾನೆ. ಕೃಷ್ಣ ಪರಮಾತ್ಮನು ಮಾತ್ರವೇ ನಮ್ಮನ್ನು ಕಾಪಾಡಲು ಸಾಧ್ಯ.
4
ಕೃಷ್ಣ ಪರಮಾತ್ಮನನ್ನು ಕುರಿತು ಯೋಚಿಸಿದುದೇ ತಡ ಅವನು ಅವಳ ಮುಂದೆ ಪ್ರತ್ಯಕ್ಷನಾದನು.
ದ್ರೌಪದಿ, ಏಕೆ ದುಃಖಿಸುತ್ತಿರುವೆ? ಮೆಲ್ಲನೆ ನನ್ನನ್ನು ಹಿಂಬಾಲಿಸು.
5
ಹಿಂದೆ ಬರುತ್ತೇನೆ.


ಕತ್ತಲಲ್ಲಿ ರಣಭೂಮಿಯಲ್ಲಿ ನಡೆದುಕೊಂಡು ಹೋದರು. ಅನೇಕ ಹೆಣಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಭೀಷ್ಮನ ಬಿಡಾರವನ್ನು ಅವರು ಸೇರಿದ ಕೂಡಲೆ......
6
ತಂಗಿ, ನಿನ್ನ ಪಾದರಕ್ಷೆಗಳನ್ನು ಕಳಚು. ಅವು ಶಬ್ದ ಮಾಡುತ್ತಿವೆ.
ಆಗಲಿ.
ಬಿಡಾರದ ಬಳಿ.......
ಹುಷ್! ವೃದ್ಧನೊಬ್ಬ ಒಳಗಡೆ ಅತ್ತಿಂದಿತ್ತ ಓಡಾಡುತ್ತಿದ್ದಾನೆ. ಶಬ್ದ ಮಾಡದೆ ಅವನಿಗೆ ನಮಸ್ಕರಿಸು.
7
ಆಗಲಿ. ಹಾಗೆಯೇ ಮಾಡುವೆನು.
ದ್ರೌಪದಿ ಭೀಷ್ಮನಿಗೆ ನಮಸ್ಕರಿಸಿದಳು. ಅವಳಾರೆಂದು ತಿಳಿಯುವ ಮುನ್ನವೇ ಭೀಷ್ಮ ಆಶೀರ್ವದಿಸಿದನು.
8
ದೀರ್ಘಸುಮಂಗಲಿಯಾಗಿ ಬಾಳು! ನೀನಾರು? ಮೇಲೇಳು. ನಿನಗೇನಾಗಬೇಕು?
9
ನನ್ನ ಗಂಡಂದಿರಿಗೆ ರಕ್ಷಣೆ ನೀಡು.
ಆಕೆ ಎದ್ದಾಗ ಅವಳು ದ್ರೌಪದಿಯೆಂದು ತಿಳಿದು ಭೀಷ್ಮನಿಗೆ ಆಶ್ಚರ್ಯವಾಯಿತು.
ಹೌದು ತಾತ!
ದ್ರೌಪದಿ ನೀನೇ?
10


11
ನೀನು ಈ ಕಗ್ಗತ್ತಲಿನಲ್ಲಿ ಇಲ್ಲಿಗೆ ಬರಲು ಕಾರಣ ವೇನು? ಒಬ್ಬಳೇ ಬಂದೆಯಾ ?
ನಿನ್ನ ಆಶೀರ್ವಾದ ಪಡೆಯಲು ಬಂದೆ. ನನ್ನೊಡನೆ ಕೃಷ್ಣನೂ ಬಂದಿರುವನು.
12
ಕೃಷ್ಣ ಬಾಗಿಲ ಬಳಿ ನಿಂತಿರುವುದನ್ನು ಭೀಷ್ಮ ನೋಡಿದನು.
ದಯವಿಟ್ಟು, ಒಳಗೆ ಬಾ. ಇದು ನಿನ್ನದೇ ಯೋಜನೆ ಎಂದು ನಾನೀಗ ಅರಿತೆ. ನಿನ್ನ ಭುಜದ ಮೇಲೆ ನೇತಾಡು ತ್ತಿರುವುದೇನು? ಪಾದರಕ್ಷೆ ಗಳಂತೆ ಇವೆ!
ಹೌದು, ಪಾಂಚಾಲಿಯವು. ಶಬ್ದವಾಗುವುದೆಂದು ತೆಗೆದುಕೊಂಡೆನು.
13
ಕೃಷ್ಣ ತನ್ನ ಪಾದರಕ್ಷೆಗಳನ್ನು ಹೊತ್ತಿರುವುದನ್ನು ನೋಡಿ ದ್ರೌಪದಿ ಹೌಹಾರಿದಳು.
ಓ ದೇವಾ! ನಿನ್ನ ಈ ಕೆಲಸದಿಂದ ನನಗೆ ಮಹಾಪಾತಕ ಪ್ರಾಪ್ತವಾಗುವುದು.
ಅಣ್ಣ ತನ್ನ ತಂಗಿಯ ಪಾದುಕೆಗಳನ್ನು ಹೊತ್ತರೆ ಏನೂ ಬಾಧಕವಿಲ್ಲ. ಆ ಬಗ್ಗೆ ಚಿಂತಿಸದಿರು. ಭೀಷ್ಮನ ಆಶೀರ್ವಾದ ಪಡೆದೆಯಾ?
14
ಭೀಷ್ಮ ಮಧ್ಯೆ ಮಾತನಾಡಿದನು.
ಕೃಷ್ಣ, ಅವಳು ಏನನ್ನೂ ಬೇಡಲಿಲ್ಲ. ಅವಳ ಕೋರಿಕೆಯನ್ನು ಕೇಳದೆಯೇ ನಾನು ಆಶೀರ್ವದಿಸಿದೆ. ನೀನು ಕಾರ್ಯ ಗಳನ್ನು ನಿನ್ನದೇ ಆದ ರೀತಿ ಯಲ್ಲಿ ಸಾಧಿಸುವೆ.
ನಿನ್ನ ಆಶೀರ್ವಾದ ಪಡೆದದ್ದು ಭಾಗ್ಯವೆ. ಪಾಂಡವರು ದೀರ್ಘಕಾಲ ಬಾಳುವರು.
15
ಕೃಷ್ಣ! ಭಕ್ತರ ರಕ್ಷಣೆಯಲ್ಲಿ ನಿನಗಿರುವ ತವಕ ಬೇರಾರಿಗೂ ಇಲ್ಲ. ನಿನ್ನ ಭಕ್ತರ ಪಾದುಕೆಯನ್ನೂ ಹೊರುವೆ. ನಿನ್ನಲ್ಲಿ ಶರಣಾದವರೇ ಧನ್ಯರು!
ಪಿತಾಮಹ! ನೀನು ದುರ್ಯೋಧನನಿಗೆ ನೀಡಿದ ಆಶ್ವಾಸನೆಯನ್ನು ನೋಡಿ ನಮಗೆ ಭಯವಾಯಿತು.
16
ಭಗವಂತನ ಅವತಾರವಾದ ಶ್ರೀಕೃಷ್ಣನೇ ಪಾಂಡವರನ್ನು ರಕ್ಷಿಸುತ್ತಿರುವಾಗ, ಬಡಪಾಯಿ ಭೀಷ್ಮ ಏನು ಮಾಡಿಯಾನು?
ನಾವು ಬಂದ ಕೆಲಸ ಆಯಿತು. ನಾವು ಹೊರಡಲು ಅನುಮತಿ ನೀಡಿ.
17
ಅವರು ಹೋಗುವುದನ್ನು ದಿಟ್ಟಿಸಿ ನೋಡುತ್ತಾ...
ಪರಂಧಾಮ! ಭಕ್ತವತ್ಸಲ! ಭಕ್ತರನ್ನು ಕಾಪಾಡಲು ನೀನು ಎಂತಹ ಕೆಲಸಕ್ಕೂ ಹಿಂಜರಿಯೆ.



ರಾಜ್‌ಕೋಟ್




ಇಂಫಾಲ್

# ರಾಮಕೃಷ್ಣ ಮಿಷನ್ನಿನ ಇತ್ತೀಚಿನ ಪರಿಹಾರ ಕಾರ್ಯಗಳು

### 1. ಚಂಡಮಾರುತ ಪರಿಹಾರ: ಗುಜರಾತ್

ಜೂನ್ 15ರಂದು ಗುಜರಾತಿನ ಕರಾವಳಿ ಪ್ರದೇಶಗಳಲ್ಲಿ ಉಂಟಾದ 'ಬಿಪರ್ಜೋಯ್' ಚಂಡಮಾರುತದಿಂದಾಗಿ ಹಾನಿಗೊಳಗಾದ ಸ್ಥಳಗಳಲ್ಲಿ **ರಾಜ್‌ಕೋಟ್** ಆಶ್ರಮವು ಪರಿಹಾರ ಕಾರ್ಯಗಳನ್ನು ನಡೆಸಿದೆ. ರಾಜ್‌ಕೋಟ್ ಜಿಲ್ಲೆಯ ಮೋರ್ಬಿ ಎಂಬಲ್ಲಿ 5137 ಆಹಾರದ ಪ್ಯಾಕೆಟ್‌ಗಳನ್ನು ಜೂನ್ 14ರಿಂದ 15ರ ವರೆಗೆ ವಿತರಿಸಿದೆ. ಇದರೊಂದಿಗೆ 300 ಕಿಲೋ ಗೋಧಿಹಿಟ್ಟು, 200 ಕಿಲೋ ಅಕ್ಕಿ, 100 ಕಿಲೋ ಬೇಳೆ, 20 ಕಿಲೋ ಮಸಾಲೆ, 100 ಕಿಲೋ ಉಪ್ಪು ಮುಂತಾದ ಪದಾರ್ಥಗಳನ್ನು ವಿತರಿಸಿದೆ. ಕಚ್ ಜಿಲ್ಲೆಯ ಆದಿಪುರ್‌ನಲ್ಲಿ ಕೂಡ ಜೂನ್ 15ರಿಂದ 17ರ ವರೆಗೆ ಹಲವು ಬಗೆಯ ಪದಾರ್ಥಗಳನ್ನು ವಿತರಣೆ ಮಾಡಲಾಗಿದೆ.

### 2. ಗಲಭೆಗ್ರಸ್ತ ಪ್ರದೇಶಗಳಲ್ಲಿ ಪರಿಹಾರ: ಮಣಿಪುರ

ಮೇ ತಿಂಗಳಲ್ಲಿ ನಡೆದ ಜನಾಂಗೀಯ ಸಂಘರ್ಷದಲ್ಲಿ ಮಣಿಪುರದಲ್ಲಿ ಅನೇಕ ಜೀವಹಾನಿ, ವಸತಿ ಹಾನಿ ಹಾಗೂ ಸೊತ್ತುಗಳ ಹಾನಿಗಳಾಗಿವೆ. ಸುಮಾರು 350 ಪರಿಹಾರ ಕೇಂದ್ರಗಳಲ್ಲಿ ವಿವಿಧ ಸಂಘ, ಸಂಸ್ಥೆಗಳಿಂದ ಸಂತ್ರಸ್ತರಿಗೆ ಆಶ್ರಯ ನೀಡಲಾಗಿದೆ. **ಇಂಫಾಲ್** ಆಶ್ರಮವು ಈ ಸಂದರ್ಭದಲ್ಲಿ ಜೂನ್ 1ರಿಂದ 25ರ ವರೆಗೆ 50 ಪರಿಹಾರ ಕೇಂದ್ರಗಳಲ್ಲಿ, 2136 ಕುಟುಂಬಗಳಿಗೆ ಸೇರಿರುವ 6804 ಜನರಿಗೆ ಆಶ್ರಯ ನೀಡಿದೆ. 150 ಕಿಲೋ ಅಕ್ಕಿ, 5015 ಕಿಲೋ ಬೇಳೆ, 905 ಕಿಲೋ ಸೋಯಾ, 1014 ಲೀ. ಅಡುಗೆ ತೈಲ, 389 ಕಿಲೋ ಮಸಾಲೆ ಪದಾರ್ಥಗಳು, 550 ಕಿಲೋ ಉಪ್ಪು, 157 ಕಿಲೋಸಕ್ಕರೆ, 2762 ಪ್ಯಾಕೆಟ್ ಬಿಸ್ಕತ್ತು, 89 ಕಿಲೋ ಮಕ್ಕಳ ಆಹಾರ, 204 ಕಿಲೋ ಮಕ್ಕಳ ಹಾಲು, 459 ಕಿಲೋ ಹಾಲಿನ ಪುಡಿ, 175 ಕಿಲೋಚಹಾ ಪುಡಿ, 1125 ಪ್ಲೇಟ್, 991 ಗ್ಲಾಸು, 48 ಚಮಚ, 3190 ಟೂತ್ ಪೇಸ್ಟ್, 2332 ಟೂತ್‌ಬ್ರಶ್, 3471 ಸ್ನಾನದ ಸಾಬೂನು ಇತ್ಯಾದಿ ಪದಾರ್ಥಗಳನ್ನು ವಿತರಿಸಲಾಗಿದೆ.

### 3. ಅಗ್ನಿ ದುರಂತ ಪರಿಹಾರ : ಅಸ್ಸಾಂ

**ಕರೀಂಗಂಜ್** ಆಶ್ರಮವು ಇತ್ತೀಚೆಗೆ ಉಂಟಾದ ಅಗ್ನಿ ಅಪಘಾತದಲ್ಲಿ ಸಂತ್ರಸ್ತರಾದವರಿಗೆ ಮೇ 30ರಂದು 10 ಕಿಲೋ ಅಕ್ಕಿ, 2 ಕಿಲೋ ಬೇಳೆ, 5 ಕಿಲೋ ಆಲೂಗಡ್ಡೆ, 1 ಕಿಲೋ ಸೋಯಾ, 1 ಲೀ. ಅಡುಗೆ ತೈಲ, 10 ಸ್ನಾನದ ಸೋಪು, 3 ಸೀರೆ, 3 ಧೋತಿ ಇತ್ಯಾದಿಗಳನ್ನು ವಿತರಿಸಿದೆ.

### 4. ಸಂತ್ರಸ್ತ ಪರಿಹಾರ:

ವಿವಿಧ ರೀತಿಯಲ್ಲಿ ಸಂತ್ರಸ್ತ ಜನರಿಗೆ ಈ ಕೆಳಗಿನ ಕೇಂದ್ರಗಳು ಹಲವು ಪದಾರ್ಥಗಳನ್ನು ವಿತರಿಸಿವೆ. ಭಾರತದಲ್ಲಿ: 1) **ದಾವಣಗೆರೆ:** ಏಪ್ರಿಲ್‌ನಿಂದ ಜೂನ್ ತಿಂಗಳವರೆಗೆ 415 ಕಿಲೋ ಅಕ್ಕಿ, 249 ಕಿಲೋ ಜೋಳ, 104 ಕಿಲೋ ಬೇಳೆ, 42 ಕಿಲೋ ಬೆಲ್ಲ, 5808 ನೋಟ್ ಪುಸ್ತಕ, 301 ಜಾಮೆಟ್ರಿ ಬಾಕ್ಸ್, 1000 ಪೆನ್ನುಗಳು, 1000 ಪೆನ್ಸಿಲ್ ಹಾಗೂ 100 ಇರೇಸರ್‌ಗಳನ್ನು ವಿತರಿಸಿದೆ. 2. **ಹತಮನಿಗುಡ:** ಮೇ 29ರಿಂದ ಜೂನ್ 8ರ ವರೆಗೆ 125 ನೋಟ್‌ಪುಸ್ತಕ, 50 ಡ್ರಾಯಿಂಗ್ ಪುಸ್ತಕ, 100 ಪೆನ್ನು, 300 ಬಣ್ಣದ ಪೆನ್ಸಿಲ್, 50 ಗ್ರಾಫೈಟ್ ಪೆನ್ಸಿಲ್, 25 ಇರೇಸರ್, 25 ಜಾಮೆಟ್ರಿ ಬಾಕ್ಸ್, 25 ಶಾಲಾ ಬ್ಯಾಗ್ ಹಾಗೂ 119 ಕೊಡೆ – ಇವನ್ನು ವಿತರಿಸಿದೆ. 3) **ಜಯರಾಮಬಾಟಿ:** ಮೇ 20 ರಂದು 200 ಕಿಲೋ ಬೇಳೆ, 100 ಲೀ. ಅಡುಗೆ ತೈಲ, 30 ಕಿಲೋ ವಿವಿಧ ಮಸಾಲೆ ಪದಾರ್ಥ, 100 ಟವೆಲ್, 100 ಸ್ನಾನದ ಸಾಬೂನು, 100 ಬಾರ್‌ಸೋಪ್, 100 ಸಾಬೂನಿನ ಪುಡಿ ಇವನ್ನು ವಿತರಿಸಿದೆ.